ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 1
(ದಿನಾಂಕ 23-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ಕೆ ವಕೀಲರಿಂದಃ-

ನಾನು 10 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಮ್ಮ ಜಮೀನಿನಲ್ಲಿ 1.69 ಎಕರೆ ಜಮೀನು ಕಡಿಮೆ ಇದೆ ಆ ಕಾರಣಕ್ಕಾಗಿ ನಾನು ಪ್ರತಿವಾದಿಯ ವಿರುದ್ಧ ದಾವೆ ದಾಖಲಿಸಿದ್ದೇನೆ. ದಾವಾ ಸರ್ವೆ ನಂ.219 ಎಫ್ ಇದು ಒಟ್ಟು ಕ್ಷೇತ್ರ 26 ಎಕರೆ ಚಿಲ್ಲರೆ ಇರುತ್ತದೆ. ಸದರಿ ಸರ್ವೆ ನಂಬರಿನಲ್ಲಿ 12 ಎಕರೆ ಕುರಿತು ನನ್ನ ಹೆಸರಿಗೆ ಪಹಣಿ ಇದೆ. ಸದರಿ 12 ಎಕರೆ ಜಮೀನು ಮೂಲತಃ ಯಾರಿಗೆ ಸೇರಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ನಮ್ಮ ತಾಯಿಂದ ನನ್ನ ಹೆಸರಿಗೆ ಬಂತು. ನಮ್ಮ ತಾಯಿಯವರು ಸದರಿ ಆಸ್ತಿಯನ್ನು ಖರೀದಿ ಮಾಡಿದ್ದರು. ಯಾವ ದಿನಾಂಕ ನನ್ನ ತಾಯಿ ಸದರಿ ಆಸ್ತಿ ಖರೀದಿಸಿದ್ದರೆಂದು ನನಗೆ ಗೊತ್ತಿಲ್ಲ. ದಾವಾಸ್ತಿಯ ಚಕ್ಕುಬಂದಿ ಪೂಃ ಕಳಸಪ್ಪ ನಾಗಪ್ಪ, ಪಃ ಅಖಂಡಿ ಈರಮ್ಮ, ಉಃ ದಾರಿ, ದಃ ಒಬ್ಬ ಸ್ವಾಮಿಯವರ ಜಮೀನಿದೆ ಅವರ ಹೆಸರು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರಿನಲ್ಲಿ ಜಂಟಿ ಖಾತೆದಾರರು ಸಹಾ ನಮೂದು ಇರುತ್ತಾರೆಂದರೆ ಸರಿ. ಜಂಟಿ ಖಾತೆದಾರರು ಅಖಂಡಿ ಈರಮ್ಮ, ಕೆ ಪ್ರಕಾಶ್, ಕೆ ಈರಮ್ಮ, ಕೆ.ಬಸಪ್ಪ, ಕಳಸಪ್ಪರವರ ನಾಗಪ್ಪ ಇವರು ಜಂಟಿಯಾಗಿರುತ್ತಾರೆ. ಅವರನ್ನು ಈ ದಾವೆಯಲ್ಲಿ ನಾನು ಪಕ್ಷಕಾರರು ಅಂತಾ ಮಾಡಿರುವುದಿಲ್ಲ. ಅದೇ ರೀತಿ ಬಸಮ್ಮ, ಸೋಮಕ್ಕ, ಕರಿಬಸಮ್ಮ ಇವರನ್ನು ಸಹಾ ನಾನು ಈ ದಾವೆಯಲ್ಲಿ ಪಕ್ಷಕಾರರು ಅಂತಾ ಮಾಡಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ನಮ್ಮ ತಾಯಿಯವರು ಖರೀದಿಸಿದ ಆಸ್ತಿಯ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಕ್ರಯಪತ್ರದಂತೆ ದಾವಾಸ್ತಿಯನ್ನು ನನ್ನ ತಾಯಿಯವರು ಮಲ್ಲಮ್ಮ ಮತ್ತು ಮಂಜುನಾಥ ಇವರಿಂದ ಖರೀದಿಸಿದ್ದು ಇದೆ ಅಂತಾ ಕ್ರಯಪತ್ರದಲ್ಲಿ ಬರೆದಿದ್ದು ಇದೆ ಎಂದರೆ ಸರಿ. ನಾನು ದಾವಾಸ್ತಿಗೆ ಸಂಬಂಧಿಸಿದ ಕೈಬರಹ ಪಹಣಿ ಮತ್ತು ಕಂಪ್ಯೂಟರ್ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಕೈಬರಹ ಪಹಣಿಗಳಲ್ಲಿ ನಮ್ಮ ತಾಯಿಗೆ ಜಮೀನು ಮಾರಾಟ ಮಾಡಿದವರ ಹೆಸರು ನಮೂದು ಇರುವುದಿಲ್ಲವೆಂದರೆ ಸರಿ. ಸದರಿ ಕ್ರಯಪತ್ರದಲ್ಲಿ ದಾವಾಸ್ತಿಯ ಚಕ್ಕುಬಂದಿ ಏನು ಬರೆದಿದ್ದು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿರುವ ಚಕ್ಕುಬಂದಿಯಲ್ಲಿ ಪ್ರತಿವಾದಿಯ ಜಮೀನು ಯಾವುದೇ ದಿಕ್ಕಿಗೂ ಇರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ಸದರಿ ಚಕ್ಕುಬಂದಿಯಲ್ಲಿ ಪ್ರತಿವಾದಿಯರು ಯಾವುದೇ ದಿಕ್ಕಿಗೂ ಬರುವುದಿಲ್ಲ ಆದ್ದರಿಂದ ಅವರು ನಮ್ಮ ಜಮೀನನ್ನು ಒತ್ತುವರಿ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 1

ದಾವಾಸ್ತಿಗೆ ಸಂಬಂಧಿಸಿದ ಇ ಸಿ ಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ನ್ಯಾಯಾಲಯಕ್ಕೆ 25 ವರ್ಷವರೆಗಿನ ಇ ಸಿ ಯನ್ನು ಹಾಜರುಪಡಿಸಿದ್ದೇನೆಂದರೆ ಸರಿ. 1980 ರ ಪೂರ್ವದಲ್ಲಿರುವ ಇ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾವು ಕೂಡ್ಲಗಿಗೆ ಹೋಗಿ ಕೇಳಿದೆವು ಅವರು ಇಲ್ಲ ಅಂತಾ ತಿಳಿಸಿದರೆನ್ನುತ್ತಾರೆ. ನಿಮ್ಮ ಕ್ರಯಪತ್ರದಂತೆ ಜಮೀನಿನ ಪಹಣಿಯಲ್ಲಿ ಹೆಸರು ದಾಖಲಾಗಿಲ್ಲ, ಆ ಕಾರಣದಿಂದಾಗಿ ನಾನು ಇ ಸಿ ಯನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ನನ್ನ ತಾಯಿ ಯಾವ ದಿನಾಂಕಕ್ಕೆ ಮರಣ ಹೊಂದಿದ್ದಾರೆನ್ನುವ ದಿನಾಂಕ ನನಗೆ ಗೊತ್ತಿಲ್ಲ, ನನ್ನ ತಾಯಿಯ ಮರಣ ಪ್ರಮಾಣಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ತಾಯಿಯ ಮರಣಪ್ರಮಾಣಪತ್ರವನುನ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾವು 5 ವರ್ಷದ ಹಿಂದೆ ದಾವಾಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ. ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ದಾವಾಸ್ತಿಯ ಅಳತೆಗಾಗಿ ಅರ್ಜಿ ನೀಡಿಲ್ಲ. ನಾವು ಹೇಳುತ್ತಿರುವ 12 ಎಕರೆ ಜಮೀನಿನಲ್ಲಿ ಒಂದು ದೊಡ್ಡ ಬಾವಿ ಇದೆ ಎಂದರೆ ಸರಿ. ನಮ್ಮ ಹೆಸರಿಗೆ ಖಾತೆಯಾದ ನಂತರ ನಾವು ಹದ್ದುಬಸ್ತು ಸರ್ವೆಗಾಗಿ ಅರ್ಜಿ ನೀಡಿರುತ್ತೇನೆ. ಆ ಅರ್ಜಿಯನ್ನು ನಾನು ಯಾವ ದಿನಾಂಕ ನೀಡಿರುತ್ತೇನಂತಾ ನನಗೆ ಗೊತ್ತಿಲ್ಲ. ಸರ್ವೆ ಮಾಡಲು ಸರ್ವೆ ಅಧಿಕಾರಿಗಳು ಸ್ಥಳಕ್ಕೆ ಬಂದಿರುತ್ತಾರೆ. ಅವರು ಬಂದು ನಮ್ಮ ಜಮೀನಿನಲ್ಲಿ ಅಳತೆ ಮಾಡಿರುತ್ತಾರೆ. ಸರ್ವೆಯವರು ಯಾವುದೇ ಅಳತೆ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ಇಲಾಖೆಯವರು ಸದರಿ ಜಮೀನಿನಲ್ಲಿ ಒಂದು ದೊಡ್ಡ ವಾವಿ ಇದೆ ಅದರಲ್ಲಿ ಅಳತೆ ಮಾಡಲು ಸಾಧ್ಯವಿಲ್ಲ ಅಂತಾ ನಿಪಿ-10 ರಂತೆ ವರದಿಯನುನ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ವರದಿಗೆ ನಾನು, ನಮ್ಮ ಅಣ್ಣ ಮತ್ತು ನಮ್ಮ ಅತ್ತಿಗೆ ಸಹಿ ಮಾಡಿರುತ್ತೇವೆಂದರೆ ಸರಿ. ಸದರಿ ವರದಿಯಲ್ಲಿ ಪ್ರತಿವಾದಿಯರು ಜಮೀನಿನಲ್ಲಿ ಒತ್ತುವರಿ ಮಾಡಿರುತ್ತಾರಂತಾ ಎಲ್ಲಿಯೂ ಬರೆದಿರುವುದಿಲ್ಲವೆಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸ ವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ